# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 201 | Pages. 2 | Date: 19-06-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 201 - ಪುಟಗಳು : 2 - 19 ಜೂನ್ 2025 ಗುರುವಾರ Ph: 8762954248 ದರ : ₹1


# ಸತ್ಯಭಾಮ ನಿರ್ಗಮನ: ಲತಾಕುಮಾರಿ ಹೊಸ ಡಿಸಿ

## ಎರಡು ವರ್ಷಗಳ ಅವಧಿಯಲ್ಲಿ ಹತ್ತು ಹಲವು ಉತ್ತಮ ಕೆಲಸ ಮಾಡಿದ ಸತ್ಯಭಾಮಗೆ ಜಿಲ್ಲೆಯ ಜನರ ಆತ್ಮೀಯ ಬೀಳ್ಕೊಡುಗೆ

### ನೂತನ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು 2012ನೇ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿದ್ದಾರೆ. ಈ ಹಿಂದೆ ಬೆಂಗಳೂರು ಗ್ರಾಮಾಂತರ ವಿಭಾಗದ ಜಿಪಂ ಮುಖ್ಯ ಕಾರ್ಯನಿರ್ವಹಣಾ ಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಇದೀಗ ಗುರುವಾರದಿಂದ ಹಾಸನ ಜಿಲ್ಲೆಯ ಆಡಳಿತದ ಜವಾಬ್ದಾರಿ ಹೊರಲಿದ್ದಾರೆ.

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಕಳೆದೆರಡು ವರ್ಷಗಳಿಂದ ಜನಪರವಾಗಿ ಕೆಲಸ ಮಾಡುವ ಮೂಲಕ ಜನಸ್ನೇಹಿ ಜಿಲ್ಲಾಧಿಕಾರಿ ಎಂದೇ ಹೆಸರುವಾಸಿಯಾಗಿದ್ದ ಸಿ.ಸತ್ಯಭಾಮ ಅವರು ವರ್ಗಾವಣೆಯಾಗಿದ್ದಾರೆ.

ಮಂಗಳವಾರ ಸಂಜೆ ಆದೇಶ ಹೊರಡಿಸಿರುವ ಸರ್ಕಾರ, ಸತ್ಯಭಾಮ ಅವರನ್ನು ಬೆಂಗಳೂರಿನ ಕರ್ನಾಟಕ ರಾಜ್ಯ ಸಮಗ್ರ ಶಿಕ್ಷಣ ಇಲಾಖೆ ಯೋಜನಾ ನಿರ್ದೇಶಕರನ್ನಾಗಿ ನಿಯೋಜನೆ ಮಾಡಿದೆ. ಸತ್ಯಭಾಮ ಇನ್ನು ಮುಂದೆ ಸಮಗ್ರ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಮುಖ್ಯ ಅಧಿಕಾರಿಯಾಗಿ ರಾಜ್ಯ ರಾಜಧಾನಿಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

### ಲತಾಕುಮಾರಿ ಹೊಸ ಡಿಸಿ

ಸತ್ಯಭಾಮ ಅವರಿಂದ ತೆರವಾದ ಸ್ಥಾನಕ್ಕೆ ನೂತನ ಜಿಲ್ಲಾಧಿಕಾರಿಯನ್ನಾಗಿ ಲತಾ ಕುಮಾರಿ ಕೆ.ಎಸ್.ಅವರನ್ನು




ನಿಯೋಜನೆ ಮಾಡಲಾಗಿದೆ.

ಸತ್ಯಭಾಮ ಅವರು ಇಂದೇ ಬೆಂಗಳೂರಿಗೆ ತೆರಳಿ ಅಧಿಕಾರ ವಹಿಸಿಕೊಂಡಿದ್ದು, ಹಾಸನ ಜಿಲ್ಲೆಯ ನೂತನ ಡಿಸಿ ಲತಾ ಕುಮಾರಿ ಅವರು ಗುರುವಾರ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಉನ್ನತ ಮೂಲಗಳಿಂದ ತಿಳಿದು ಬಂದಿದೆ.

### ಸತ್ಯಭಾಮ ಅವರ ಸಾಧನೆ

ಸತ್ಯಭಾಮ ಅವರು 2023 ಜು. 12 ರಂದು ಹಾಸನಕ್ಕೆ ಜಿಲ್ಲಾಧಿಕಾರಿಯಾಗಿ ಬಂದರು. ಈ ಅವಧಿಯಲ್ಲಿ ಅವರು ಅತ್ಯುತ್ತಮ ಕೆಲಸ ನಿರ್ವಹಿಸುವ ಮೂಲಕ ಜನರ ಪ್ರೀತಿ, ವಿಶ್ವಾಸ ಮತ್ತು ಅಭಿಮಾನ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಲೋಕಸಭಾ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿದರು. ಮುಖ್ಯಮಂತ್ರಿಗಳ ನಾಲ್ಕಾರು ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಆಯೋಜಿಸಿ ಸೈ ಎನಿಸಿಕೊಂಡರು.

ಎಲ್ಲ ಜನರ ಪರವಾಗಿ ಕೆಲಸ ಮಾಡುವ ಮೂಲಕ ಜಿಲ್ಲೆಗೆ ಏನಾದರೂ ಒಂದು ಕೊಡುಗೆ ನೀಡಬೇಕೆಂಬ ದೊಡ್ಡ ಸಂಕಲ್ಪ ಹೊಂದಿದ್ದ ಅವರ ಕನಸು ಸಾಕಾರವಾಗದೇ ಇದ್ದರೂ, ತಮ್ಮ ಅವಧಿಯಲ್ಲಿ ಹಾಸನ ಜನ ಎಂದಿಗೂ ನೆನಪಿನಲ್ಲಿಟ್ಟುಕೊಳ್ಳುವ ಕೆಲಸ ಮಾಡಿದ್ದಾರೆ ಎಂಬುದು ನಿಸ್ಸಂದೇಹ.

### ಸತ್ಯಭಾಮ ಕಾರ್ಯವೈಖರಿ ವಿಶೇಷತೆ

ಸಾಮಾನ್ಯ ನಾಗರಿಕರು ಕೂಡ ಜಿಲ್ಲಾಧಿಕಾರಿಯೊಂದಿಗೆ ಮುಕ್ತವಾಗಿ ಸಂವಾದ ನಡೆಸಲು ಮತ್ತು ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು ಅವಕಾಶ ಕಲ್ಪಿಸುವ ಮೂಲಕ ಅಧಿಕಾರಿಯೊಬ್ಬರು ಕಚೇರಿಯೊಳಗೆ ಮಾತ್ರವಲ್ಲ, ಹೊರಗೆ ಜನರ ಮಧ್ಯೆ ಇರಬೇಕು ಎಂಬುದನ್ನು ಕೃತಿಯಲ್ಲಿ ತೋರಿಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಕಂದಾಯ ಇಲಾಖೆಗೆ ಸಂಬಂಧಿಸಿದ ಅರ್ಜಿ ವಿಲೇವಾರಿ, ಆಧಾರ್ ಸೀಲಿಂಗ್, ಪೌತಿ ಖಾತೆ ಅಭಿಯಾನ ಸೇರಿದಂತೆ ಅನೇಕ ವಿಚಾರಗಳಲ್ಲಿ ಸತ್ಯಭಾಮ ಅವರು ವೈಯಕ್ತಿಕವಾಗಿ ಮುತುವರ್ಜಿ ವಹಿಸಿದ್ದರು. ಇದರ ಪರಿಣಾಮವಾಗಿ, ಹಾಸನ ಜಿಲ್ಲೆ ಕಂದಾಯ ವಿಭಾಗದಲ್ಲಿ ರಾಜ್ಯದಲ್ಲಿ ನಂಬರ್ ಒನ್ ಸ್ಥಾನಕ್ಕೇರಲು ಸಾಧ್ಯವಾಯಿತು. ಇದೇ ಕಾರಣಕ್ಕೆ ಅವರು ಉತ್ತಮ ಅಧಿಕಾರಿ ಎಂಬ ಪ್ರಶಸ್ತಿಯನ್ನೂ ಪಡೆದರು.

### ಸರ್ಕಾರಿ ಶಾಲೆಗಳ ಅಭಿವೃದ್ಧಿ

ಅವರ ವೈಯಕ್ತಿಕ ಆಸಕ್ತಿಯಿಂದಾಗಿ ಹಾಸನದ ಅನೇಕ ಸರ್ಕಾರಿ ಶಾಲೆಗಳು ಅಭಿವೃದ್ಧಿ ಕಂಡವು. ದಾನಿಗಳ ಸಹಕಾರದೊಂದಿಗೆ ಸಾವಿರಾರು ಬೆಂಚುಗಳನ್ನು ಸರ್ಕಾರಿ ಶಾಲೆಗಳಿಗೆ ನೀಡಲಾಯಿತು. ನೂರಾರು ಶಾಲೆಗಳ ಕಟ್ಟಡಗಳ ರಿಪೇರಿ, ಶೌಚಾಲಯ ಹಾಗೂ ಅಡುಗೆ ಕೋಣೆ ನಿರ್ಮಾಣ, ಸುಣ್ಣ-ಬಣ್ಣ ಸೇರಿದಂತೆ ಅನೇಕ ಕಾರ್ಯಗಳು ಯಾವುದೇ ಸರ್ಕಾರಿ ಅನುದಾನವಿಲ್ಲದೆ ದಾನಿಗಳ ಸಹಾಯದಿಂದ ನಡೆದದ್ದು ಸ್ಮರಣೀಯ.

### ಯಶಸ್ವಿ ಹಾಸನಾಂಬೆ ಉತ್ಸವ

ಹಿಂದೆಂದೂ ಕಾಣದಷ್ಟು ಅದ್ಧೂರಿಯಾಗಿ ಹಾಸನಾಂಬ ಉತ್ಸವವನ್ನು ಸತತ ಎರಡು ವರ್ಷಗಳ ಕಾಲ ಯಶಸ್ವಿಯಾಗಿ ನಡೆಸಿದ ಕೀರ್ತಿ ಸತ್ಯಭಾಮ ಅವರಿಗೆ ಸಲ್ಲುತ್ತದೆ. ದೇವರಲ್ಲಿ ಅಪಾರ ಭಕ್ತಿ ಹೊಂದಿದ್ದ ಅವರು, ತಮ್ಮ ಮನೆಯ ಕಾರ್ಯದಂತೆ ಜಾತ್ರಾ ಮಹೋತ್ಸವವನ್ನು ವರ್ಣರಂಜಿತವಾಗಿ ಮತ್ತು ಅರ್ಥಪೂರ್ಣವಾಗಿ ಆಯೋಜಿಸಿದ್ದು, ಹಾಸನದ ಜನರ ಮನಸ್ಸಿನಲ್ಲಿ ಬಹುಕಾಲ ಉಳಿಯಲಿದೆ. ಇವರ ಅವಧಿಯಲ್ಲೇ ಐತಿಹಾಸಿಕ ದಾಖಲೆ ಎಂಬಂತೆ ಕಾಣಿಕೆ ರೂಪದಲ್ಲಿ ಸುಮಾರು 14 ಕೋಟಿ ಆದಾಯ ಸಂಗ್ರಹಣೆಯಾಗಿರುವುದು ಸಾರ್ವಕಾಲಿಕ ದಾಖಲೆಯೇ ಸರಿ.

### ಮುಜರಾಯಿ ದೇವಸ್ಥಾನಗಳಿಗೆ ಕಾಯಕಲ್ಪ

ಜಿಲ್ಲೆಯ ಸಾವಿರಕ್ಕೂ ಅಧಿಕ ಮುಜರಾಯಿ ದೇವಸ್ಥಾನಗಳ ಆಸ್ತಿಯನ್ನು ಸಂರಕ್ಷಿಸುವಲ್ಲಿ ಸತ್ಯಭಾಮ ಅವರು ಪ್ರಮುಖ ಪಾತ್ರ ವಹಿಸಿದರು.

ದೇವಸ್ಥಾನಗಳ ಆಸ್ತಿಗಳನ್ನು ಅವುಗಳ ಹೆಸರಿಗೆ ಪಹಣಿಯಲ್ಲಿ ನೋಂದಾಯಿಸಿ, ನಂತರ ಸರ್ಕಾರಿ ದಾಖಲೆಗಳಲ್ಲಿ ಸೇರಿಸಲು ಅವರು ಮಹತ್ವದ ಕ್ರಮ ಕೈಗೊಂಡರು. ಅವರ ಈ ಕಾರ್ಯವನ್ನು ಮೆಚ್ಚಿದ ಕಂದಾಯ ಹಾಗೂ ಮುಜರಾಯಿ ಸಚಿವರು, ಇದನ್ನು ರಾಜ್ಯಮಟ್ಟದ ಕಾರ್ಯಕ್ರಮವನ್ನಾಗಿ ಅನುಷ್ಠಾನಗೊಳಿಸಲು ಸೂಚಿಸಿದ್ದಲ್ಲದೆ, ಹಾಸನವನ್ನು ಮಾದರಿ ಜಿಲ್ಲೆಯಾಗಿ ಪರಿಗಣಿಸಿದರು.

ಒಟ್ಟಿನಲ್ಲಿ ಡಿಸಿಯಾಗಿ ಜನ ಮೆಚ್ಚುವ ಕಾರ್ಯ ಮಾಡಿರುವ ಸತ್ಯಭಾಮ ಅವರನ್ನು ಜಿಲ್ಲೆಯ ಜನರನ್ನು ಸದಾ ನೆನೆಯುತ್ತಾರೆ. ವಿಐಪಿಗಳು ಮಾತ್ರವಲ್ಲದೆ, ಶ್ರೀಸಾಮಾನ್ಯನೂ ಡಿಸಿ ಕಚೇರಿಗೆ ಬರಬಹುದು, ಭೇಟಿಯಾಗಬಹುದು, ಮಾತನಾಡಬಹುದು ಎಂಬ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ್ದು ಈಗ ಇತಿಹಾಸ.

---

# ಬಿಳಿ ಸುಳಿ ರೋಗ: ಪರಿಹಾರಕ್ಕೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಜಿಲ್ಲಾದ್ಯಂತ 12 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆ ಜೋಳ ಬೆಳೆ ಬಿಳಿ ಸುಳಿ ರೋಗದಿಂದ ನಷ್ಟಕ್ಕೀಡಾಗಿದ್ದು ಪರಿಹಾರ ಒದಗಿಸಬೇಕು ಹಾಗೂ ಪರಿಣತರ ತಂಡವನ್ನು ಕಳುಹಿಸಿ ಅಧ್ಯಯನ ಮಾಡಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ನವದೆಹಲಿಯಲ್ಲಿ ಬುಧವಾರ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಜಿಲ್ಲೆ 2.50 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶ ಹೊಂದಿದ್ದು ಮುಂಗಾರು ಹಂಗಾಮಿನಲ್ಲಿ ಶೇ. 40 ಅಂದರೆ 1,10,000 ಹೆಕ್ಟೇರ್ ಪ್ರದೇಶದಲ್ಲಿ ಜೋಳ ಬೆಳೆಯಲಾಗುತ್ತಿದೆ. ಆದರೆ ಈ ಬಾರಿ ಬಿಳಿ ಸುಳಿ ರೋಗ ಬೆಳೆಗೆ ತಗುಲಿ ನಷ್ಟವುಂಟು ಮಾಡಿದೆ ಎಂದರು.

45,000 ಹೆಕ್ಟೇರ್‌ಗಳಲ್ಲಿ ಬಿತ್ತನೆಯಾದ ಜೋಳದ



ಪೈಕಿ 12,000 ಹೆಕ್ಟೇರ್‌ನಲ್ಲಿ ಬಿಳಿ ಸುಳಿ ರೋಗ ಹರಡಿದೆ. ಈ ರೋಗ ಮಣ್ಣಿನಲ್ಲಿ ಹಾಗೂ ಗಾಳಿಯಲ್ಲಿ ಹರಡುವುದರಿಂದ ತ್ವರಿತವಾಗಿ ವ್ಯಾಪಿಸಬಹುದೆಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಹಾಸನ ಕೃಷಿ ಮಹಾವಿದ್ಯಾಲಯ ಮತ್ತು ಮಂಡ್ಯ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳ ತಂಡಗಳು ಇತ್ತೀಚೆಗೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಈ ರೋಗದ ವೇಗದ ಹಬ್ಬುವಿಕೆಯನ್ನು ದೃಢಪಡಿಸಿದ್ದಾರೆ. ಸಮಯಕ್ಕೆ ಸರಿಯಾದ ಜಾಗೃತಿ ಮೂಡಿಸುವಿಕೆ ಮತ್ತು ನಿಯಂತ್ರಣ ಕ್ರಮಗಳಿದ್ದರೂ ಕೂಡ ರೈತರು ಈ ರೋಗವನ್ನು ನಿಯಂತ್ರಿಸಲು ವಿಫಲರಾಗುತ್ತಿದ್ದಾರೆ ಎಂದರು.

ಮೆಕ್ಕೆಜೋಳ ಹಾನಿಗೀಡಾದ ಪ್ರದೇಶಗಳಲ್ಲಿ ಸಮಗ್ರ ಪರಿಶೀಲನೆ ನಡೆಸಲು ಐಸಿಎಆರ್ ಅಥವಾ ಇತರ ಕೇಂದ್ರ ಸರ್ಕಾರದ ಸಂಶೋಧನಾ ಸಂಸ್ಥೆಗಳಿಂದ ಪರಿಣತ ವಿಜ್ಞಾನಿಗಳ ತಂಡವನ್ನು ನಿಯೋಜಿಸಬೇಕು.

ಭವಿಷ್ಯದ ರೋಗದ ಉಲ್ಬಣವನ್ನು ತಡೆಯಲು ಪರಿಣಿತ ಸಲಹೆ ಮತ್ತು ದೀರ್ಘಕಾಲಿಕ ರೋಗ ನಿರ್ವಹಣಾ ತಂತ್ರಗಳನ್ನು ಒದಗಿಸಬೇಕು. ಬೆಳೆಯ ನಷ್ಟ ಮತ್ತು ರೈತರ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಸೂಕ್ತ ಪರಿಹಾರ ಒದಗಿಸಬೇಕು ಎಂದು ಮನವಿ ಸಲ್ಲಿಸಿದರು.

---

# ದೇಶ ಮೊದಲು ಬಿಜೆಪಿ ಸಂಕಲ್ಪ: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಸಕಲೇಶಪುರ: 2047ರ ವೇಳೆಗೆ ವಿಕಸಿತ ಭಾರತ ನಮ್ಮ ಗುರಿಯಾಗಿದ್ದು ದೇಶದ 140 ಕೋಟಿ ಜನರಿಂದ ನವ ಭಾರತ ನಿರ್ಮಾಣವಾಗಲಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಬಿಜೆಪಿ ಮಂಡಲ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಅವಿಕಸಿತ ಭಾರತದ ಅಮೃತ ಕಾಲಟಿ ಸೇವೆ, ಸುಶಾಸನ, ಬಡವರ ಕಲ್ಯಾಣದ ಮೋದಿ ಸರ್ಕಾರದ 11 ವರ್ಷಗಳ ಕಾರ್ಯಾಗಾರದಲ್ಲಿ ಮಾತನಾಡಿ, ಪ್ರಧಾನಿ ಮೋದಿ ಅವರ ದಕ್ಷ ಆಡಳಿತದಲ್ಲಿ ಪಾಕಿಸ್ತಾನ ವಿರುದ್ಧ ಇತ್ತೀಚೆಗೆ ನಡೆದ ಆಪರೇಷನ್ ಸಿಂದೂರದ ಯಶಸ್ಸು, ವಿಶ್ವ ಆರ್ಥಿಕತೆಯಲ್ಲಿ 4ನೇ ಸ್ಥಾನ, ಆಯುಷ್ಮಾನ್ ಭಾರತ ಮುಂತಾದ ಯೋಜನೆಗಳ ಸಾಧನೆಗಳನ್ನು ಇಡೀ ದೇಶವೇ ಕೊಂಡಾಡುತ್ತಿದೆ ಎಂದರು.

ಬಾಹ್ಯಾಕಾಶ ಹಾಗೂ ಸೇನೆಯಲ್ಲಿ




ಬಹಳ ಬದಲಾವಣೆ ತರಲಾಗಿದೆ. ನಮಗೆ ದೇಶ ಮೊದಲು, ಇದು ನಮ್ಮ ಸಂಕಲ್ಪ. ಭಾರತದ ಶಕ್ತಿ ಏನೆಂದು ಇಡೀ ಜಗತ್ತಿಗೆ ತೋರಿಸಿಕೊಟ್ಟಿದೆ ಎಂದರು. ಡಿಜಿಟಲೀಕರಣದಿಂದ ಬ್ಯಾಂಕಿಂಗ್ ಕ್ಷೇತ್ರಕ್ಕೆ ಹೊಸ ಬಲ ಬಂದಿದೆ. ಬಡವರು, ಮಧ್ಯಮ ವರ್ಗ, ವಂಚಿತರು ಎಲ್ಲರಿಗೂ ತಳಮಟ್ಟದ ಸುಧಾರಣೆ ತಂದಿದ್ದೇವೆ. ಈ ಹಿಂದೆ ಜನರು ಮೂಲ ಸೌಲಭ್ಯಗಳಿಗಾಗಿ ಸರ್ಕಾರವನ್ನು ಅಂಗಲಾಚಬೇಕಿತ್ತು. ಈಗ ಮನೆ ಬಾಗಿಲಿಗೆ ಸವಲತ್ತು ಬರುತ್ತಿವೆ ಎಂದು ತಿಳಿಸಿದರು.

ಇಡೀ ವಿಶ್ವವೇ ಮೆಚ್ಚಿದ ನಾಯಕ ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರದ 11 ವರ್ಷದ ಸಾಧನೆ ಅಗಾಧವಾದುದು. ಅವರ ಸಾಧನೆಯನ್ನು ಬಿಜೆಪಿ ಕಾರ್ಯಕರ್ತರು ಹಳ್ಳಿ -ಹಳ್ಳಿ ಮನೆ ಮನೆಗಳಿಗೂ ತಲುಪಿಸುವ ಕಾರ್ಯ ಅತ್ಯಂತ ಮಹತ್ವದ್ದಾಗಿದೆ.

ಮೋದಿ ಅಸಾಮಾನ್ಯ ಕಾರ್ಯವೇ ಇಡೀ ವಿಶ್ವವೇ ಕೊಂಡಾಡಲು ಕಾರಣವಾಗಿದೆಟ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಲಕು ಬಿಜೆಪಿ ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಪ್ರಧಾನ ಕಾರ್ಯದರ್ಶಿಗಳಾದ ಅಗ್ನಿ ಸೋಮಶೇಖರ್, ಮಧು ಬೊಮ್ಮನಕೆರೆ, ತಾಲ್ಲೂಕು ಮಹಿಳಾ ಮೋರ್ಚಾ ಅಧ್ಯಕ್ಷೆ ಬಬಿತ ವಿಶ್ವನಾಥ್, ನಗರ ಘಟಕ ಅಧ್ಯಕ್ಷ ಲೋಕೇಶ್ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಬಾಗೆ ಗೋಪಿ, ಎಸ್ಸಿ ಮೋರ್ಚಾ ಅಧ್ಯಕ್ಷ ಸ್ಟಿವನ್ ಪ್ರಕಾಶ್, ಯುವ ಮೋರ್ಚಾ ಅಧ್ಯಕ್ಷ ನಿಖಿಲ್ ಹಲಸುಲಿಗೆ, ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷರಾದ ರಾಜ್ ಕುಮಾರ್ ಪ್ರತಾಪ್, ಪುರಸಭಾ ಸದಸ್ಯರಾದ ಪ್ರದೀಪ್, ವನಜಾಕ್ಷಿ, ರೇಖಾ ರುದ್ರಕುಮಾರ್ ಬಿಜೆಪಿ ಮುಖಂಡರಾದ ಜೈ ಮಾರುತಿ ದೇವರಾಜ್, ರಾಮಚಂದ್ರ, ದೊಡ್ಡ ದಿಣ್ಣೆ ಜೈ ಪ್ರಕಾಶ್ ಮತ್ತಿತರರಿದ್ದರು.

---

# ತುರುವೇಕೆರೆ ಮಾರ್ಗ ಬಸ್ ಸಂಚಾರ ಆರಂಭ



ಚನ್ನರಾಯಪಟ್ಟಣ: ಚನ್ನರಾಯಪಟ್ಟಣದಿಂದ ದಿಡಗ ಹುಗೆನಹಳ್ಳಿ, ದಿಡಗ, ತುಮಕೂರು ಮಾರ್ಗವಾಗಿ ತುರುವೇಕೆರೆಗೆ ಸಂಪರ್ಕಿಸುವ ನೂತನ ಬಸ್ ಸಂಚಾರಕ್ಕೆ ಶಾಸಕ ಸಿ.ಎನ್. ಬಾಲಕೃಷ್ಣ ಬುಧವಾರ ಚಾಲನೆ ನೀಡಿದರು.

ಈ ಮಾರ್ಗದಲ್ಲಿ ಬೆಳಿಗ್ಗೆ 8 ಗಂಟೆಗೆ ಚನ್ನರಾಯಪಟ್ಟಣದಿಂದ ಹೊರಟು ದಿಡಗ ಹುಗೆನಳ್ಳಿ, ದಬ್ಬೇಗಟ್ಟ ಮಾರ್ಗವಾಗಿ ತುರುವೇಕೆರೆಗೆ ಹೋಗಿ ಪುನಃ ಅಲ್ಲಿಂದ ಅದೇ ಮಾರ್ಗವಾಗಿ ಚನ್ನರಾಯಪಟ್ಟಣ ತಲುಪಲಿದೆ ಇದೇ ಮಾರ್ಗದಲ್ಲಿ ದಿನಕ್ಕೆ ಎರಡು ಅಥವಾ ಮೂರು ಬಾರಿ ಓಡಾಡುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ದಿಡಗಾದಲ್ಲಿ ಬಸ್ಸಿ ಗೆ ಚಾಲನೆ ನೀಡಿ ಈ ಭಾಗದ ಜನರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ತಾಲೂಕು ಪಂಚಾಯಿತಿ ಸದಸ್ಯರಾದ ಪುಟ್ಟರಾಜು, ಮತ್ತೊಬ್ಬ ತಾಲೂಕು ಪಂಚಾಯಿತಿ ಸದಸ್ಯ ಎಂಆರ್ ವಾಸು, ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯ ಡಿ ತುಮಕೂರು ಮಧು, ಯೋಗೇಶ್ ಉಳ್ಳಾವಳ್ಳಿ,ರಂಗಪ್ಪ ಬಿಳಿಕೆರೆ, ದಿಡಗ ತುಮಕೂರು ನಾಗರಾಜು, ಮಂಜುನಾಥ್, ಇತರರು ಉಪಸ್ಥಿತರಿದ್ದರು.

---

# ಬೆಳೆಗಾರರ ಸಂಘಕ್ಕೆ ಮೇಘರಾಜ್ ಅಧ್ಯಕ್ಷ

ಸಕಲೇಶಪುರ: ತಾಲ್ಲೂಕು ಕಸಬಾ ಹೋಬಳಿ ಬೆಳೆಗಾರರ ಸಂಘದ ನೂತನ ಅಧ್ಯಕ್ಷರಾಗಿ ಉಮ್ಮತ್ತೂರು ಕೆ.ವಿ. ಮೇಘರಾಜ್, ಪ್ರಧಾನ ಕಾರ್ಯದರ್ಶಿಯಾಗಿ ನಟ್ಟಹಳ್ಳಿ ಎನ್.ಡಿ. ರಾಕೇಶ್ ಅವಿರೋಧ ಆಯ್ಕೆಯಾದರು.

ಸಂಘದ ಸರ್ವ ಸದಸ್ಯರ ಸಭೆಯಲ್ಲಿ 2025 ರಿಂದ 27ನೇ ಸಾಲಿನ ಸಂಘದ ನೂತನ ಪಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ಉಪಾಧ್ಯಕ್ಷರಾಗಿ ಬಿರಡಹಳ್ಳಿ ಬಿ.ಎಂ. ಮದನ್‌ಕುಮಾರ್, ಖಜಾಂಚಿಯಾಗಿ ಹೆಬ್ಬಸಾಲೆ ವಿಜಿತ್, ಸಹ ಕಾರ್ಯದರ್ಶಿಯಾಗಿ ಮಳಲಿ ಪುಟ್ಟರಾಜ್, ಸಂಘಟನಾ ಕಾರ್ಯದರ್ಶಿಯಾಗಿ ಹಲಸುಲಿಗೆ ಪಾಲಾಕ್ಷ, ಕೌಡಹಳ್ಳಿ ಗಂಗಾಧರ್ ಆಯ್ಕೆಯಾಗಿದ್ದಾರೆ.



ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಹಳಸೆ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಟಿ.ಪಿ. ಸುರೇಂದ್ರ, ಕೆಜಿಎಫ್ ಮಾಜಿ ಅಧ್ಯಕ್ಷ ಡಾ. ಎಚ್.ಟಿ. ಮೋಹನ್ ಕುಮಾರ್, ಹಾಸನ ಜಿಲ್ಲಾ ಬೆಳೆಗಾರರ ಸಂಘದ ಅಧ್ಯಕ್ಷ ಎ.ಎಸ್.ಪರಮೇಶ್, ಉಪಾಧ್ಯಕ್ಷ ಮಂಜುನಾಥ್ ಶೆಟ್ಟಿ, ಕಾರ್ಯದರ್ಶಿ ಕೆ.ಬಿ. ಲೋಹಿತ್, ಎಚ್‌ಡಿಪಿಎ ಮಾಜಿ ಅಧ್ಯಕ್ಷ ಕೆ.ಎನ್. ಸುಬ್ರಹ್ಮಣ್ಯ, ಪಿಆರ್‌ಎಫ್ ಅಧ್ಯಕ್ಷ ಕೃಷ್ಣಮೂರ್ತಿ ಖಂಡಿಗೆ, ಕಸಬಾ ಹೋಬಳಿ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಡಿ. ಪ್ರಸನ್ನಕುಮಾರ್ ಕಾರ್ಯದರ್ಶಿ ಹಲಸುಲಿಗೆ ಮಹೇಶ್ ಹಾಗೂ ಇತರರು ಇದ್ದರು.

---

# ಅರೇಹಳ್ಳಿಯಲ್ಲಿ ಭಾರಿ ಮಳೆ : ಕುಸಿದು ಬಿದ್ದ ಶಾಲಾ ಕಾಂಪೌಂಡ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಬೇಲೂರು : ತಾಲೂಕಿನ ಮಲೆನಾಡು ಭಾಗವಾದ ಅರೇಹಳ್ಳಿ ಹಾಗು ಸುತ್ತಮುತ್ತಲಿನ ಪ್ರದೇಶದಲ್ಲಿ ಕಳೆದೆರಡು ದಿನಗಳಿಂದ ಮುಂಗಾರು ಮಳೆ ಚುರುಕುಗೊಂಡಿದ್ದು ಕಳೆದ ರಾತ್ರಿ ಸುರಿದ ಧಾರಕಾರ ಮಳೆಗೆ ಸರ್ಕಾರಿ ಶಾಲೆಯ ಕಾಂಪೌಂಡ್ ಕುಸಿದು ಬಿದ್ದಿದೆ.

ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪರಿಮಿತಿಯ ಸುತ್ತಲೂ ಸುಮಾರು ಹತ್ತು ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ಕಾಂಪೌಂಡ್‌ನ ಒಂದು ಬದಿಯ ಉದ್ದಗಲಕ್ಕೂ ತಡರಾತ್ರಿ ಸುರಿದ ಧಾರಾಕಾರ ಮಳೆಗೆ ಕುಸಿದು ಬಿದ್ದಿದೆ.ಇದರಿಂದ ಪಕ್ಕದಲ್ಲೇ ನೂತನವಾಗಿ ನಿರ್ಮಿಸಲಾದ ರೈತ ಸಂಪರ್ಕ ಕೇಂದ್ರದ ಸಿಮೆಂಟ್ ಇಂಟರ್ಲಾಕ್ ಗಳು ಸಹ ಸಾಕಷ್ಟು ಹಾನಿಯಾಗಿದೆ.



ಶಿಥಿಲವಾಗಿ ಬಿದ್ದ ಕಾಂಪೌಂಡ್ ಮಳೆ ಗಾಳಿ ಬಿರುಗಾಳಿಯಿಂದ ಗೋಡೆಯ ಸಾಮರ್ಥ್ಯ ಕಡಿಮೆಯಾಗಿದ್ದಲ್ಲದೆ ಕೆಲಮೊಮ್ಮ ಕಾಂಪೌಂಡ್ ಗೋಡೆಗಳನ್ನು ನಿರ್ಮಿಸುವಾಗ ಸರಿಯಾದ ಗುಣಮಟ್ಟದ ವಸ್ತುಗಳನ್ನು ಬಳಸದೆ ಇರುವುದು ಅಥವಾ ಸೂಕ್ತ ಇಂಜಿನಿಯರಿಂಗ್ ಮಾನದಂಡಗಳನ್ನು ಪಾಲಿಸದಿರುವುದೇ ಇದಕ್ಕೆ ಕಾರಣವಾಗಿರಬಹುದು, ಮಣ್ಣು ಸಡಿಲವಾಗಿದ್ದಾಗ ಅಥವಾ ಅಡಿಪಾಯವನ್ನು ಸರಿಯಾಗಿ ವಿನ್ಯಾಸಗೊಳಿಸಲಿದ್ದಾಗ ಭಾರಿ ಮಳೆಯಿಂದಾಗಿ ದೊಡ್ಡ ಕುಸಿತಕ್ಕೆ ಕಾರಣವಾಗಿದೆ.

ಈ ಕುಸಿತದ ಬಗ್ಗೆ ರೈತ ಸಂಪರ್ಕ ಕೇಂದ್ರದ ಸಂಬಂಧ ಪಟ್ಟ ಹಿರಿಯ ಅಧಿಕಾರಿಗಳು ಹಾಗೂ ಶಾಲೆಯ ಮುಖ್ಯೋಪಾಧ್ಯಾಯರು ಹಾಗು ಶಾಲಾ ಆಡಳಿತ ಮಂಡಳಿಯವರು ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಿ ವಿದ್ಯಾರ್ಥಿಗಳ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕೆಂಬುದು ಸ್ಥಳೀಯರ ಆಗ್ರಹಿಸಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ ಮಾತನಾಡಿ ಅರೇಹಳ್ಳಿ ಸರಕಾರಿ ಶಾಲೆಯ ಕಾಂಪೌಂಡ್ ಕುಸಿದ ವಿಚಾರ ನಮ್ಮ ಗಮನಕ್ಕೆ ಬಂದಿದ್ದು ಇದು ಕೃಷಿ ಇಲಾಖೆ ರೈತ ಸಂಪರ್ಕಕ್ಕೆ ಸೇರಿದ್ದಾಗಿದ್ದು ಇದನ್ನು ಅವರಿಗೆ ತಿಳಿಸಿ ಮೇಲ್ಭಾಗದಲ್ಲಿ ಪೈಪ್ ನೀರು ಕಾಂಪೌಂಡ್ ಗೆ ಬೀಳುತ್ತಿದ್ದರಿಂದ ಈ ರೀತಿ ಆಗಿರಬಹುದು.ಅಲ್ಲದೆ ಅದನ್ನು ಬೇರೆಡೆಗೆ ತಿರುಗಿಸಲು ಹೇಳಿದ್ದು ಹಾಗು ಕಾಂಪೌಂಡ್ ಅನ್ನು ಹೊಸದಾಗಿ ನಿರ್ಮಿಸಿಕೊಡಬೇಕು ಮತ್ತೆ ಇನ್ನು ಮುಂದೆ ಹೀಗಾಗದಂತೆ ಜಾಗ್ರತಿ ವಹಿಸಬೇಕೆಂದು ಅವರಿಗೆ ಎಚ್ಚರಿಕೆ ನೀಡಿದರು.

---

# ಗಾಂಜಾ ಮಾರಾಟ : ಆರೋಪಿ ಬಂಧನ

ಹಾಸನ: ಮಾದಕ ವಸ್ತುವಾದ ಗಾಂಜಾವನ್ನು ಸಾಗಾಟ ಮಾಡುತ್ತಿದ್ದವನ್ನು ಬಂಧಿಸಿರುವ ಸೆನ್ ಠಾಣೆ ಪೊಲಿಸರು, ಆತನಿಂದ 4 ಲಕ್ಷ ಬೆಲೆಬಾಳುವ ಸುಮಾರು 8 ಕೆ.ಜಿ ಗಾಂಜಾಸೊಪ್ಪು ವಶ ಪಡಿಸಿಕೊಂಡಿದ್ದಾರೆ.

ಜೂ. 17 ರಂದು ಮಧ್ಯಾಹ್ನ ಸಿಇಎನ್ ಠಾಣೆ ಪಿಎಸ್‌ಐ ಮಧು ಅವರಿಗೆ ತುಮಕೂರು ಜಿಲ್ಲೆ ತಿಪಟೂರು ಕಡೆಯಿಂದ ಮಂಗಳೂರು ಕಡೆಗೆ ಗಂಡಸಿ ಮಾರ್ಗವಾಗಿ ಆಸಾಮಿಯೊಬ್ಬ ಮಾದಕ ವಸ್ತು ಗಾಂಜಾವನ್ನು ಅಕ್ರಮವಾಗಿ ಸಾಗಾಣೆ ಮತ್ತು ಮಾರಾಟ ಮಾಡಲು ಗಂಡಸಿ ಹ್ಯಾಂಟ್ ಪೋಸ್ಟ್ ಸಮೀಪದಲ್ಲಿ ಇರುವುದಾಗಿ ಬಾತ್ಮಿದಾರರಿಂದ ಮಾಹಿತಿ ಬಂದಿದೆ.

ಕೂಡಲೇ ಸಿಬ್ಬಂದಿಗಳೊಂದಿಗೆ ದಾಳಿ ಮಾಡಿ ಆರೋಪಿ ಮೂಲತಃ ಬೇಲೂರು ತಾಲೂಕು ಬೈರೇಗೌಡನಕೊಪ್ಪಲು ಗ್ರಾಮದ ಹಾಲಿ ತುಮಕೂರು ಜಿಲ್ಲೆ ಬಡ್ಡಿಹಳ್ಳಿ ಗ್ರಾಮದಲ್ಲಿ ಗುಜರಿ ವ್ಯಾಪಾರ ಮಾಡುತ್ತಿದ್ದ ಶಶಿ ಅಲಿಯಾಸ್ ಶೇಷೇಗೌಡ (45) ಎಂಬಾತನನ್ನು ಬಂಧಿಸಿದ್ದಾರೆ.

ಆತನ ಬಳಿಯಿದ್ದ ಗಾಂಜಾ ಸೊಪ್ಪು ವಶಪಡಿಸಿಕೊಂಡು ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

---

# ಭಾರತೀಯರ ಸುರಕ್ಷಿತ ವಾಪಸ್ ಗೆ ಸಂಸದ ಮನವಿ

ಹಾಸನ: ಇಸ್ರೇಲ್-ಇರಾನ್ ನಡುವೆ ಏರ್ಪಟ್ಟಿರುವ ಸಂಘರ್ಷದಿಂದ ಅಲ್ಲಿ ನೆಲೆಸಿರುವ ಭಾರತೀಯರು ಆತಂಕಕ್ಕೆ ಒಳಗಾಗಿದ್ದು ನೆರವಿಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ವಿದೇಶಾಂಗ ವ್ಯವಹಾರಗಳ ರಾಜ್ಯ ಖಾತೆ ಸಚಿವ ಕೀರ್ತಿ ವರ್ದನ್ ಸಿಂಗ್ ಅವರಿಗೆ ಮನವಿ ಸಲ್ಲಿಸಿದರು.

ನವದೆಹಲಿಯ ಕಚೇರಿಯಲ್ಲಿ ಬುಧವಾರ ಭೇಟಿಯಾಗಿ, ಹಾಸನ ಲೋಕಸಭಾ ಕ್ಷೇತ್ರ ಹಾಗೂ ಕರ್ನಾಟಕದ ವಿವಿಧ ಭಾಗಗಳಿಂದ ತೆರಳಿದ್ದ ನಾಗರಿಕರ ಸುರಕ್ಷಿತ ವಾಪಸ್ ಗೆ ಮನವಿ ಮಾಡುತ್ತೇನೆ. ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದ ಹಿನ್ನಲೆಯಲ್ಲಿ ಪರಿಸ್ಥಿತಿ ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ಕರ್ನಾಟಕದಿಂದ ಬಹುಸಂಖ್ಯೆಯ ಜನರು ಉದ್ಯೋಗ, ವ್ಯಾಪಾರ ಹಾಗೂ ಉನ್ನತ ಶಿಕ್ಷಣಕ್ಕಾಗಿ ಇಸ್ರೇಲ್‌ನಲ್ಲಿ ವಾಸವಿದ್ದಾರೆ. ಕೆಲವರು ಉನ್ನತ ಶಿಕ್ಷಣಕ್ಕಾಗಿ ಇರಾನ್‌ಗೂ ಹೋಗಿದ್ದಾರೆ. ಈ ಪ್ರದೇಶದಲ್ಲಿ ಉಂಟಾಗುತ್ತಿರುವ ಉದ್ವಿಗ್ನ ಪರಿಸ್ಥಿತಿಯ ದೃಷ್ಟಿಯಿಂದ, ಅವರು ಸುರಕ್ಷಿತವಾಗಿರಲು ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ತವರಿಗೆ ಮರಳಲು ನೆರವಾಗಬೇಕೆಂದು ವಿನಂತಿಸಿದರು. ಇಸ್ರೇಲ್‌ನಲ್ಲಿ 18,000ಕ್ಕಿಂತ ಹೆಚ್ಚು ಭಾರತೀಯರು ಇದ್ದಾರೆ. ಅನೇಕರು ಕರ್ನಾಟಕಕ್ಕೆ ಸೇರಿದವರಾಗಿದ್ದಾರೆ. ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಜನರು ಇಸ್ರೇಲ್ ನಲ್ಲಿ ವಾಸವಿದ್ದಾರೆ.

ನಮ್ಮವರನ್ನು ಕರೆತರಲು, ಕರ್ನಾಟಕದ ಕುಟುಂಬಗಳೊಂದಿಗೆ ಸಂಪರ್ಕ ಸಾಧಿಸುವಲ್ಲಿ ಬೇಕಾದರೆ ನನ್ನ ಕಚೇರಿ ಸಂಪೂರ್ಣ ಸಹಕಾರ ನೀಡಲು ಸಿದ್ಧವಿದೆ ಎಂದು ಸಚಿವರಲ್ಲಿ ಮನವಿ ಮಾಡಿದರು.

## ವಿದ್ಯುತ್ ತಂತಿ ತುಳಿದು ತಾಯಿ- ಮರಿ ಆನೆ ಸಾವು : ಉನ್ನತ ಕಾನೂನು ತನಿಖೆಗೆ ಒತ್ತಾಯ

# ಕಾಡಾನೆ ಸಾವಿಗಿಲ್ಲವೇ ಸಾಮಾಜಿಕ ನ್ಯಾಯ..?

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ : ಜಿಲ್ಲೆಯಲ್ಲಿ ದಶಕಗಳ ಹಿಂದಿನಿಂದಲೂ ಕಾಡಾನೆ-ಮಾನವ ಸಂಘರ್ಷ ನಡೆಯತ್ತಲೇ ಇದೆ. 80 ಕ್ಕೂ ಹೆಚ್ಚು ಜನರ ಸಾವು, ಇಷ್ಟೇ ಅಲ್ಲದೆ 40 ಕ್ಕೂ ಹೆಚ್ಚು ಕಾಡಾನೆಗಳು ಹಲವು ಕಾರಣಗಳಿಂದ ಜೀವ ಕಳೆದುಕೊಂಡಿವೆ. ಇದುವರೆಗೂ ಸಾವನ್ನಪ್ಪಿರುವ ಕಾಡಾನೆಗಳ ಸಾವಿಗೂ ಕೂಡ ಸಾಮಾಜಿಕ ನ್ಯಾಯ ಸಿಗುವ ನಿಟ್ಟಿನಲ್ಲಿ ಉನ್ನತ ಮಟ್ಟದ ಕಾನೂನು ತನಿಖೆಯಾಗಬೇಕು ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರರು ಹಾಗೂ ಹಾಗೂ ಮಾಜಿ ಜಿ.ಪಂ ಸ್ಥಾಯಿ ಸಮಿತಿ ಅಧ್ಯಕ್ಷರಾದ ಡಿಸಿ ಸಣ್ಣಸ್ವಾಮಿ ಒತ್ತಾಯಿಸಿದ್ದಾರೆ.

ಜಿಲೆಯಲ್ಲಿ ಹಲವು ಕಾರಣಗಳಿಂದ ಸಾವನ್ನಪ್ಪಿರು ಕಾಡಾನೆಗಳ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಕಲೇಶಪುರ ತಾಲ್ಲೂಕಿನ ಉದೇವಾರ ಗ್ರಾಮ ಸಮೀಪದ ಎಬಿಸಿ ಕಾಫಿ ಎಸ್ಟೇಟ್ ನಲ್ಲಿ ಕಳೆದ ಶನಿವಾರ ನೆಲದ ಮೇಲೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಕಾಡಾನೆ ತನ್ನ ಮರಿಯೊಂದಿಗೆ ಸಾವಿಗೀಡಾದ ದಾರುಣ ಘಟನೆ ನಡೆದಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಡಾನೆಗಳು ಸಾವನ್ನಪ್ಪಿವೆ. ಆನೆಗಳು ಸಂಚರಿಸುವ ಪ್ರದೇಶಗಳಲ್ಲಿ ವಿದ್ಯುತ್ ಕಂಬಗಳನ್ನು ಎತ್ತರಕ್ಕೆ ಏರಿಸಬೇಕು. ಕಂಬಗಳ ಸುತ್ತಲಿನ ಮರದ ಕೊಂಬೆಗಳನ್ನು ಕಡಿಯಬೇಕು ಎಂಬ ನಿಯಮವಿದ್ದರೂ ಸೆಸ್ಕಾಂ ಹಾಗು ಅರಣ್ಯ ಇಲಾಖೆ ನಿರ್ಲಕ್ಷ್ಯ ವಹಿಸಿದೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಎರಡು ಅಮಾಯಕ ಕಾಡಾನೆಗಳು ಬಲಿಯಾಗಿವೆ. ಈ ಘಟನೆಗೆ ಕಾರಣವಾದ ವಿದ್ಯುತ್ ಇಲಾಖೆ ಹಾಗೂ ಅರಣ್ಯ ಇಲಾಖೆ ಪ್ರಕರಣ ದಾಖಲಿಸಬೇಕು ಹಾಗೂ ಅವರ ವಿರುದ್ಧ ಉನ್ನತ ಮಟ್ಟದ ತನಿಖೆಯಾಗಿ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಮಲೆನಾಡ ಭಾಗದಲ್ಲಿ ಈ ಸಂಘರ್ಷದ ಆರಂಭದಿಂದ ಇಲ್ಲಿಯವರೆಗೂ ಮತ್ತು ಮುಂದೆ ಆಗಬಹುದಾದ ಎಲ್ಲಾ ಅನಾಹುತಗಳಿಗೂ ಮನುಷ್ಯನಾದ ನಾವೆ ಕಾರಣವೇ ಹೊರತು ಆನೆಗಳಲ್ಲ. ಆದರೆ ತನ್ನದಲ್ಲದ ತಪ್ಪಿಗೆ ಕಾಡಾನೆಗಳು ಎಲ್ಲಾರಿಂದ ದೂಷಣೆಗೆ ಒಳಗಾಗಿ ಜೀವವನ್ನೇ ಕಳೆದುಕೊಳ್ಳುವ

### ಜಿಲ್ಲಾ ಕಾಂಗ್ರೆಸ್ ವಕ್ತಾರ ಡಿಸಿ ಸಣ್ಣಸ್ವಾಮಿ ಹೇಳಿಕೆ



ಸ್ಥಿತಿ ನಿರ್ಮಾಣವಾಗಿದೆ. ಕಾಡಾನೆ ದಾಳಿಯಿಂದ ಮನುಷ್ಯ ಸತ್ತರೆ ಹಣ ರೂಪದಲ್ಲಿ ಪರಿಹಾರ, ಅದೇ ಆನೆ ಸತ್ತರೆ ಯಾವ ಪರಿಹಾರವು ಇಲ್ಲ, ಯಾರು ಹೊಣೆಗಾರರು ಆಗುವುದಿಲ್ಲ ಎಂಬುವುದೇ ಬೇಸರದ ಸಂಗತಿ ಎಂದು ಅಸಮದಾನ ಹೊರಹಾಕಿದ್ದಾರೆ.

ಜೀವ ಸಂಕುಲದಲ್ಲಿ ಅತ್ಯಂತ ಬುದ್ಧಿವಂತ ಎನಿಸಿಕೊಂಡಿರುವ ಮನುಷ್ಯರು ಹಸಿವು ತಾಳಲಾರದೆ ಇದ್ದಾಗ ಬೇಡಿಯಾದರು ತಿನ್ನಬಲ್ಲ, ತನ್ನ ಮನೆಯನ್ನು ಯಾರಾದರು ಕಸಿದುಕೊಂಡಾಗ ಹೋರಾಡಿಯಾದರು ಕಿತ್ತು ಮರಳಿ ಪಡೆಯಬಲ್ಲ, ಆದರೆ ಮೂಖ ಪ್ರಾಣಿಗಳಾದ ಕಾಡಾನೆಗಳು ತಮ್ಮ ನೆಲೆಯನ್ನು ಕಳೆದುಕೊಂಡು ಅಲ್ಲಿ ಅಹಾರ ಸಿಗದೆ ನಾಡಿನತ್ತ ಲಗ್ಗೆ ಇಡಲಾರಂಭಿಸಿವೆ. ಎಷ್ಟೋ ಆನೆಗಳ ಗುಂಪು ಕಾಡನ್ನು ಮರೆತು ಕಾಫಿತೋಟಗಳಲ್ಲಿ ಸಂತಾನವೃದ್ಧಿ ಮಾಡಿಕೊಂಡಿದ್ದು ಇದೆ. ಈ ಸಂಶಗಳನ್ನು ಗಮನಿಸಿದರೆ ಯಾರಿಗೆ ಯಾರು ರಕ್ಷಣೆ ಕೊಡಬೇಕು ಯಾರ ಅಸ್ತಿತ್ವವನ್ನು ಯಾರು ಕಸಿದುಕೊಂಡಿದ್ದಾರೆ ಎನ್ನುವುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ಈ ವರೆಗೂ ಕಾಡಾನೆ ಮಾನವ ಸಂಘರ್ಷಕ್ಕೆ ಹಲವು ಜೀವಗಳು ಬಲಿಯಾಗಿವೆ. ಕೋಟ್ಯಾಂತರ ರೂ ಬೆಳೆ ಹಾನಿ, ಆಸ್ತಿ ಹಾನಿ ಉಂಟಾಗಿದೆ. ಆಯಾ ಕಾಲಕ್ಕಷ್ಟೆ ಸರ್ಕಾರಗಳು ಪರಿಹಾರ ನೀಡಿವೆ ವಿನಃ ಈ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯುವಲ್ಲಿ ಯಶಸ್ವಿಯಾಗಿಲ್ಲ. ಈ ವರೆಗೂ ಮೃತಪಟ್ಟಿರುವ ಕಾಡಾನೆಗಳ ಸಾವಿಗೆ ತನಿಖೆ ನಡೆಸುತ್ತೇವೆ ಎಂದು ಅರಣ್ಯ ಇಲಾಖೆ ಹೇಳಿರುವುದು ಬಿಟ್ಟರೆ ಸಾವಿಗೆ ಕಾರಣಕರ್ತರಾದವರಿಗೆ ಯಾವ ರೀತಿಯು ಕಾನೂನು ಕ್ರಮವನ್ನು ಜರುಗಿಸಿರುವುದನ್ನು ನಾವೆಂತೂ ಇದುವರೆಗೂ ಕಾಣಲೇ ಇಲ್ಲ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಇದುವರೆಗೂ ಹಲವು ಕಾರಣಗಳಿಂದ ಸಾವನ್ನಪ್ಪಿರುವ ಕಾಡಾನೆಗಳ ಸಾವಿಗೆ ಕಾರಣವಾದ ಅಂಶಗಳ ಬಗ್ಗೆಯು ತನಿಖೆ ಆಗಬೇಕು. ಇವೆಲ್ಲಾವು ಕೇವಲ ಮಾತಿಗೆ ಸೀಮಿತವಾಗದೆ ತರ್ತುಕಾರ್ಯಗತವಾದರೆ ಮಾತ್ರ ಮಾನವ ಮತ್ತು ಕಾಡಾನೆ ಸಂಗರ್ಷಗಳ ಸಾವಿಗೆ ಅಂತ್ಯಕಾಣಿಸಬಹುವುದು ಎಂದು ತಿಳಿಸಿದ್ದಾರೆ.

### ಕೇಂದ್ರ ಸರ್ಕಾರ ನಿರ್ಲಕ್ಷ್ಯವೇ ಈ ಸಂಘರ್ಷಕ್ಕೆ ನೇರ ಹೊಣೆ

ಜಿಲ್ಲೆಯಲ್ಲಿ ಕಾಡಾನೆ ಸಮಸ್ಯೆ ಕುರಿತು ಪಾರ್ಲಿಮೆಂಟ್ ನಲ್ಲಿ ಸಂಸದ ಶ್ರೇಯಸ್ ಪಟೇಲ್ ಧ್ವನಿ ಎತ್ತಿ ಗಂಭೀರ ಸಮಸ್ಯೆ ಬಗ್ಗೆ ಗಮನ ಸೆಳೆದರು. ಆದರೂ ಕೇಂದ್ರ ಸರ್ಕಾರಕ್ಕೆ ಇದಕ್ಕೆ ಮನೆ ಹಾಕದೆ ತನ್ನ ನಿರ್ಲಕ್ಷ್ಯ ತೋರಿತು. ಕೇಂದ್ರ ಸರ್ಕಾರ ಕಾಡಾನೆ ಮಾನವ ಸಂಘರ್ಷ ತಪ್ಪಿಸಲು ಒಮ್ಮಲೇ ಕಾಡಾನೆ ಸ್ಥಳಾಂತರಕ್ಕೆ, ಶಾಶ್ವತ ಪರಿಹಾರಕ್ಕೆ ವಿಶೇಷ ಅನುದಾನ ನೀಡಬೇಕು ಹಾಗೂ ವೈಜ್ಞಾನಿಕವಾಗಿ ಪರಿಹಾರ ಕಂಡುಹಿಡಿಯಬೇಕು, ಮತ್ತು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡಬೇಕು ಎಂದು ಡಿ.ಸಿ ಸಣ್ಣಸ್ವಾಮಿಯವರ ಒತ್ತಾಯವಾಗಿದೆ.

### ವೈಜ್ಞಾನಿಕ ಚಿಂತನೆ ಅಗತ್ಯ

ಇಂಹತ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ನಿಂತು ಭವಿಷ್ಯದ ಅನಾಹುತಗಳನ್ನು ಹೇಗೆ ತಪ್ಪಿಸಬಹುದು ಎಂಬ ವೈಜ್ಞಾನಿಕ ಹಾಗೂ ಜಾಣ್ಮೆಯಿಂದ ಆಲೋಚನೆ ನಡೆಸಬೇಕಿರುವುದೊಂದೇ ನಮ್ಮ ಮುಂದಿನ ಏಕೈಕ ಮಾರ್ಗ. ಕಾಡಾನೆಗಳನ್ನು ಒಮ್ಮಲೆ ಸ್ಥಳಾಂತರ ಮಾಡುವುದು, ಅನೆಧಾಮ ನಿರ್ಮಾಣ ಮಾಡಬೇಕು ಆಶಯವನ್ನು ಸಚಿವ ಈಶ್ವರ ಖಂಡ್ರೆ, ಸಂಸದ ಶ್ರೇಯಸ್ ಪಟೇಲ್ ಕೇಂದ್ರ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಿದರು. ಆದರೂ ಸಹ ಇದುವರೆಗೂ ಒಂದೆರೆಡು ಕಾಡಾನೆಗಳನ್ನು ಸ್ಥಳಾಂತರ ಮಾಡುವುದು ಬಿಟ್ಟರೆ ಇನ್ನ್ಯಾವುದೇ ಜೀವ ಹಾನಿ ತಡೆಯಲು ಸಾಧ್ಯವಾಗಲಿಲ್ಲ ಎಂಬುವುದೇ ದಶಕಗಳ ಬೇಸರ ಸಂಗತಿಯಾಗಿದೆ ಎಂದಿದ್ದಾರೆ.

## ಇಸ್ರೇಲ್-ಇರಾನ್ ಯುದ್ಧ ಒಂದು ವಿಶ್ಲೇಷಣೆ



ಇಸ್ರೇಲ್ ಮತ್ತು ಇರಾನ್ ನಡುವಿನ ಶತ್ರುತ್ವ ಹೊಸದೇನಲ್ಲ. ಈ ಸಂಘರ್ಷಕ್ಕೆ ಧಾರ್ಮಿಕ, ರಾಜಕೀಯ ಮತ್ತು ಭೌಗೋಳಿಕ ಅಂಶಗಳ ಮಿಶ್ರಣವೇ ಕಾರಣ. 1979ರ ಇಸ್ಲಾಮಿಕ್ ಕ್ರಾಂತಿಗಿಂತ ಮುಂಚೆ ಇರಾನ್ ಹಾಗೂ ಇಸ್ರೇಲ್ ಸಂಬಂಧಗಳು ಉತ್ತಮವಾಗಿದ್ದವು. ಆದರೆ ಆಯತೊಲ್ಲಾ ಖೊಮೇನಿ ನೇತೃತ್ವದ ಶಿಯಾ ಇಸ್ಲಾಮಿಕ್ ಆಡಳಿತ ಬಂದ ನಂತರ ಇಸ್ರೇಲ್ ಅನ್ನು ಶತ್ರು ರಾಷ್ಟ್ರವೆಂದು ಘೋಷಿಸಲಾಯಿತು.

ಇರಾನ್‌ನ ಶಿಯಾ ನಾಯಕತ್ವವು ಲೆಬನಾನ್‌ನ ಹೆಜ್ಬುಲ್ಲಾ ಹಾಗೂ ಪ್ಯಾಲೆಸ್ಟೈನಿನ ಹಮಾಸ್ ಉಗ್ರ ಸಂಘಟನೆಗಳಿಗೆ ಆರ್ಥಿಕ, ತಾಂತ್ರಿಕ ಮತ್ತು ಶಸ್ತ್ರಾಸ್ತ್ರ ನೆರವು ಒದಗಿಸುತ್ತಿದೆ. ಇಸ್ರೇಲ್ ಇದರ ವಿರುದ್ಧ ಖಡಕ್ ತಕ್ಷಣ ಪ್ರತಿಕ್ರಿಯಿಸುತ್ತಿದೆ.

**ಸ್ಟಕ್ಸ್ ನೆಟ್ ವೈರಸ್ (2010):**

ಇಸ್ರೇಲ್-ಅಮೆರಿಕಾ ಜಂಟಿಯಾಗಿ ಇರಾನ್‌ನ ಯುರೇನಿಯಂ ಸಂಸ್ಕರಣೆ ಕೇಂದ್ರಗಳನ್ನು ಸೈಬರ್ ದಾಳಿಯಿಂದ ಹಾನಿಗೊಳಿಸಿತು.

ಇಸ್ರೇಲ್ ತನ್ನ ಗಡಿ ಬಳಿ ಇರಾನ್ ನ ಉಗ್ರ ತಾಣಗಳನ್ನು ತಡೆಗಟ್ಟಲು ನಿಯಮಿತವಾಗಿ ಬಾಂಬ್ ದಾಳಿ ನಡೆಸುತ್ತಿದೆ.

ಇರಾನ್ ತನ್ನ ಯುರೇನಿಯಂ ಸಂಸ್ಕರಣಾ ಮಟ್ಟವನ್ನು ಹೆಚ್ಚಿಸುತ್ತಿರುವ ಕುರಿತು ಅಂತರರಾಷ್ಟ್ರೀಯ ಪರಿಗಣನೆ ಇದೆ.

ಇಸ್ರೇಲ್ ಈ ಬೆಳವಣಿಗೆಗೆ ಟಿಝೀರೋ ಟೋಲೆರೆನ್ಸ್ ಟ ನೀತಿ ಅನುಸರಿಸುತ್ತಿದೆ. 2025ರ ಆರಂಭದಲ್ಲಿ ಇರಾನ್‌ನ ಡ್ರೋನ್ ಗಳಿಂದ ಇಸ್ರೇಲ್ ಗಗನಪಥ ದಾಳಿ ನಡೆದ ಬಗ್ಗೆ ವರದಿಗಳು ಬಂದಿದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಉಗ್ರ ಶಿಬಿರಗಳ ಮೇಲೆ ದಾಳಿ ನಡೆಸಿತು.

**ಜಾಗತಿಕ ಪ್ರತಿಕ್ರಿಯೆ**

ಅಮೆರಿಕಾ: ಇಸ್ರೇಲ್‌ನ ಪ್ರಮುಖ ಬೆಂಬಲದಾರ. ಆದರೆ ಸುದೀರ್ಘ ಯುದ್ಧ ಆರಂಭವಾಗದಂತೆ ತಡೆಯಲು ದ್ವಂದ್ವ ನೀತಿ ಅನುಸರಿಸುತ್ತಿದೆ.

ರಷ್ಯಾ ಮತ್ತು ಚೀನಾ: ಇರಾನ್ ಗಾಗಿ ತಾಂತ್ರಿಕ ಬೆಂಬಲ, ಆದರೆ ಬಹಿರಂಗವಾಗಿ ಯುದ್ಧ ಬೆಂಬಲ ಇಲ್ಲ.

ಸೌದಿ ಅರೇಬಿಯಾ: ಇರಾನ್ ವಿರೋಧಿ ನಿಲುವಿಗೆ ಇಸ್ರೇಲ್‌ಗೆ ಸಮರ್ಥನೆ ನೀಡುವ ಸಾಧ್ಯತೆ, ಆದರೆ ಅರಬ್ ರಾಷ್ಟ್ರಗಳ ಒಗ್ಗಟ್ಟು ಒತ್ತಡದಲ್ಲಿದೆ.

**ಭವಿಷ್ಯದ ಆಯಾಮಗಳು**

ಇಸ್ರೇಲ್ ಮತ್ತು ಇರಾನ್ ನೇರ ಯುದ್ಧದಲ್ಲಿ ತೊಡಗಿಕೊಳ್ಳುವ ಸಾಧ್ಯತೆ ಕಡಿಮೆ, ಆದರೆ ಪರೋಕ್ಷವಾಗಿ (ಠಿಡಿಥಿ ತಿಚಿಡಿ) ಮುಂದುವರಿಯುವ ಸಾಧ್ಯತೆ ಹೆಚ್ಚು.

**ಪ್ಯಾಲೆಸ್ಟೈನ್ ಸಮಸ್ಯೆ**

ಈ ಸಂಘರ್ಷವು ಪ್ಯಾಲೆಸ್ಟೈನ್ ವಿಷಯದಲ್ಲಿಯೂ ತೀವ್ರತೆಯುಂಟುಮಾಡಬಹುದು.

ಗಲ್ಫ್ ಪ್ರದೇಶದಲ್ಲಿ ಯುದ್ಧ ಉದ್ಭವವಾದರೆ ತೈಲ ಬೆಲೆಗಳಲ್ಲಿ ಏರಿಕೆ ಸಂಭವನೀಯ.

ಇಸ್ರೇಲ್-ಇರಾನ್ ನಡುವಿನ



ಸಂಘರ್ಷ ಧಾರ್ಮಿಕ ಭಿನ್ನತೆ, ಪ್ರಾದೇಶಿಕ ಪ್ರಭುತ್ವ ಮತ್ತು ಭದ್ರತಾ ರಾಜಕೀಯದ ಜಟಿಲ ಮಿಶ್ರಣವಾಗಿದೆ. ನೇರ ಯುದ್ಧದಿಂದ ವಿಶ್ವದಲ್ಲೇ ಅಶಾಂತಿ ಉಂಟಾಗುವ ಸಾಧ್ಯತೆ ಇರುವ ಕಾರಣ, ಜಾಗತಿಕ ಶಕ್ತಿಗಳು ಇದನ್ನು ಶಮನಗೊಳಿಸುವತ್ತ ಕಸರತ್ತು ನಡೆಸುತ್ತಿವೆ.

## ಜೂ.21 ರಂದು ಕೆಎನ್‌ಆರ್ ಅಮೃತ ಮಹೋತ್ಸವ

### ಅಂದೇ ಅಭಿನಂದನಾ ಗ್ರಂಥ ಬಿಡುಗಡೆ: ಎಲ್ಲರೂ ಭಾಗಿಯಾಗಿ ಯಶಸ್ವಿಗೊಳಿಸಲು ಸಮಿತಿ ಮನವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಹಕಾರ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಕೆ.ಎನ್. ರಾಜಣ್ಣ ಅವರ 75ನೇ ಜನ್ಮದಿನ ಅಮೃತ ಮಹೋತ್ಸವ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮ ಜೂನ್ 21 ರಂದು ಶನಿವಾರ ಬೆಳಗ್ಗೆ 11 ಗಂಟೆಗೆ ತುಮಕೂರಿನ ಬಿ.ಹೆಚ್. ರಸ್ತೆಯ ಜೂನಿಯರ್ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಭಿನಂದನಾ ಸಮಿತಿಯ ಮಾದಿಗ ದಂಡೋರ ಜಿಲ್ಲಾಧ್ಯಕ್ಷ ಟಿ.ಆರ್. ವಿಜಯಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಕಲ್ಪತರು ನಾಡು ತುಮಕೂರು ಜಿಲ್ಲೆಯ ರೈತರು ಸೇರಿದಂತೆ, ಸಾಮಾಜಿಕ, ಸಹಕಾರ ವಲಯದ ಸಮಗ್ರ ಅಭಿವೃದ್ಧಿಗೆ ಬದ್ಧತೆಯಿಂದ ತೊಡಗಿಸಿ ಕೊಂಡಿರುವ ಜನಪ್ರಿಯ ನಾಯಕ, ಸಹಕಾರ ರಂಗದ ಪ್ರತಿಷ್ಠಿತ ಸಹಕಾರ ರತ್ನ ಪುರಸ್ಕೃತರಾದ ಕೆ.ಎನ್. ರಾಜಣ್ಣ ಅವರು 75ನೇ ವರ್ಷಕ್ಕೆ ಕಾಲಿರಿಸಿದ್ದಾರೆ.




ಎಂಎಲ್‌ಸಿಯಾಗಿ, ಬೆಳ್ಳಾವಿ ಶಾಸಕರಾಗಿ, ಪ್ರಸ್ತುತ ಎರಡನೇ ಅವಧಿಗೆ ಮಧುಗಿರಿ ಶಾಸಕರಾಗಿರುವ ರಾಜಣ್ಣ ಅವರು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ, ಹಾಲಿ ನಿರ್ದೇಶಕರಾಗಿ ಮತ್ತು ತುಮಕೂರು ಡಿಸಿಸಿ ಬ್ಯಾಂಕಿನಲ್ಲಿ ಕಳೆದ 3 ದಶಕಗಳಿಂದ ಅಧ್ಯಕ್ಷರಾಗಿ ಜಿಲ್ಲೆಯ ರೈತರ ಹಿತೈಷಿಯಾಗಿ ಅತ್ಯುತ್ತಮ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದರು.

ನೇರ ನಡೆ-ನುಡಿಯ ರಾಜಣ್ಣ ಅವರು ಪಕ್ಷಾತೀತವಾಗಿ, ಜಾತ್ಯಾತೀತವಾಗಿ, ರೈತರ, ಅಬಲರ, ಶೋಷಿತರ ಹಾಗೂ ಎಲ್ಲಾ ಜಾತಿಯ ಬಡವರ ಏಳಿಗೆಗೆ ನಿರಂತರ ಶ್ರಮಿಸುತ್ತಿರುವ ಓರ್ವ ಸಹಕಾರಿಯಾಗಿದ್ದಾರೆ.

ದಿ.ಇಂದಿರಾ ಗಾಂಧಿ, ದೇವರಾಜ ಅರಸು, ಬಂಗಾರಪ್ಪ ಮತ್ತು ಹಾಲಿ ಸಿಎಂ ಸಿದ್ದರಾಮಯ್ಯ ಅವರ ಆದರ್ಶದಂತೆ ಸಮಾಜ ಸೇವೆ ಹಾಗೂ ಗುಣಮಟ್ಟದ ವಿದ್ಯಾವಂತರನ್ನು ಮತ್ತು ಸಮಾಜದ ಬಗ್ಗೆ ಕಳಕಳಿ ಇರುವ ಯುವರನ್ನು ಸೃಷ್ಟಿಸುವಲ್ಲಿ ಹೆಚ್ಚು ಶ್ರಮಿಸುತ್ತಿದ್ದಾರೆ.

ರಾಜಣ್ಣ ಅವರ ಕಳೆದ 50 ವರ್ಷಗಳ ಸಾಮಾಜಿಕ, ಸಹಕಾರ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಗುರುತಿಸಿ, ಅವರ ಬದುಕಿನ ಸಾರ್ಥಕತೆಯ 75ನೇ ಜನ್ಮದಿನದ ಅಂಗವಾಗಿ ತುಮಕೂರು ಜಿಲ್ಲೆಯ ಆತ್ಮೀಯ ಗೆಳೆಯರು, ಅಭಿಮಾನಿಗಳು, ಹಿತೈಷಿಗಳು ರಾಜಣ್ಣ ಅವರನ್ನು ಸಾರ್ವಜನಿಕವಾಗಿ ಗೌರವಿಸಿ, ಅಭಿನಂದಿಸಲು ತೀರ್ಮಾನಿಸಿದ್ದಾರೆ.

ಜೊತೆಗೆ ಕೆ.ಎನ್.ಆರ್. ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಲು ಉತ್ಸುಕರಾಗಿದ್ದಾರೆ. ಅದಕ್ಕಾಗಿ ಕಾರ್ಯಕ್ರಮ ನಿಯೋಜನೆ ಮಾಡಲಾಗಿದೆ ಎಂದರು.

ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ.ಜಿ. ಪರಮೇಶ್ವರ್,

ಕೇಂದ್ರ ಸಹಾಯಕ ರೈಲ್ವೆ ಮತ್ತು ಜಲಶಕ್ತಿ ಸಚಿವ ವಿ. ಸೋಮಣ್ಣ, ಜಿಲ್ಲೆಯ ಹಿರಿಯ ನಾಯಕರು ಸೇರಿದಂತೆ ಸಚಿವರು, ಶಾಸಕರು, ಸಹಕಾರಿ ಮುಖಂಡರು, ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಸಮಾರಂಭಕ್ಕೆ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ವಿಜಯಕುಮಾರ್ ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಅಹಿಂದ ಚಳುವಳಿ ಜಂಟಿ ರಾಜ್ಯ ಸಂಚಾಲಕ ಜಗದೀಶ್ ಚೌಡಳ್ಳಿ, ಜೈಭೀಮ್ ಬ್ರಿಗೇಡ್ ಜಿಲ್ಲಾಧ್ಯಕ್ಷ ರಾಜೇಶ್, ವಾಲ್ಮೀಕಿ ಸಂಘದ ಜಿಲ್ಲಾಧ್ಯಕ್ಷ ಎನ್.ವೈ. ಶ್ರೀನಿವಾಸ್, ವಾಲ್ಮೀಕಿ ಸಮಾಜದ ಶಿವಪ್ಪನಾಯಕ ಬ್ರಹ್ಮದೇವರಹಳ್ಳಿ ಇತರರಿದ್ದರು.

## ಆಭರಣದಾಸೆಗೆ ವೃದ್ಧೆಯ ಕೊಲೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಚಿನ್ನಾಭರಣದ ಆಸೆಗಾಗಿ ದುಷ್ಕರ್ಮಿಗಳು ವೃದ್ಧೆಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿ, ಆಭರಣ ದೋಚಿ ಪರಾರಿಯಾಗಿರುವ ಘಟನೆ ಪಟ್ಟಣದ ಮಕಾನ್‌ನಲ್ಲಿ ನಡೆದಿದೆ.

ಸ್ಥಳೀಯ ನಿವಾಸಿ ಲೋಕೇಶ ಎಂ.ಎಸ್ ಅವರ ಸೋದರತ್ತೆ ಕಮಲಮ್ಮ (68) ಪತಿ ಪುಟ್ಟಲಕ್ಕೇಗೌಡ ಕೆ.ಜೆ ಎಂಬುವರು ಗ್ರಾಮ ಲೆಕ್ಕಾಧಿಕಾರಿಯಾಗಿ ನಿವೃತ್ತಿ ಹೊಂದಿ, 2019ರಲ್ಲಿ ಅಪಘಾತದಲ್ಲಿ ಮೃತಪಟ್ಟದ್ದಾರೆ. ಇವರಿಗೆ ರವಿಕುಮಾರ್ ಕೆ.ಪಿ ಹಾಗೂ ಪ್ರೇಮ್ ಕುಮಾರ್ ಕೆ.ಪಿ ಎಂಬ ಇಬ್ಬರು ಗಂಡು ಮಕ್ಕಳಿದ್ದು, ಇಬ್ಬರೂ ದೈಹಿಕವಾಗಿ ಚಿಕ್ಕಂದಿನಿಂದಲೂ ಅಂಗವಿಕಲರಾಗಿದ್ದರು. ಆದರೆ ರವಿಕುಮಾರ 2016ರಲ್ಲಿ ಪ್ರೇಮಕುಮಾರ್ 2017 ರಲ್ಲಿ ಮೃತಪಟ್ಟಿದ್ದಾರೆ.



ಬಳಿಕ ಕಮಲಮ್ಮ ಅವರು ಪಟ್ಟಣದ ಹೊಳೇನರಸೀಪುರ ರಸ್ತೆಯ ಕಗ್ಗಲಿಕಾವಲಿನ ಅವರ ಸ್ವಂತ ಮನೆಯಲ್ಲಿ ಒಬ್ಬರೇ ವಾಸವಾಗಿದ್ದರು.

ಲೋಕೇಶ ಅವರು 2-3 ದಿನಗಳಿಗೊಮ್ಮೆ ಹೋಗಿ ಅವರ ಯೋಗಕ್ಷೇಮ ವಿಚಾರಿಸಿಕೊಂಡು, ಊಟ ತಿಂಡಿ, ಹಣ್ಣು, ತಿನಿಸು ಕೊಟ್ಟು ಮಾತನಾಡಿಸಿಕೊಂಡು ಬರುತ್ತಿದ್ದರು.

ಜೂ.16 ರಂದು ಬೆಳಿಗ್ಗೆಯೂ ಹೋಗಿ ಬಂದಿದ್ದರು.

ಜೂ. 17 ರಂದು ಸಂಜೆ ಪಕ್ಕದ ಮನೆಯ ಮಾಸ್ಟರ್ ರಾಮಚಂದ್ರ ಹಾಗೂ ಅಂಗಡಿ ಶಶಿಕಲಾ ಎಂಬುವರು ಫೋನ್ ಮಾಡಿ ನಿಮ್ಮ ಅತ್ತೆ ಫೋನ್ ರಿಸೀವ್ ಮಾಡುತ್ತಿಲ್ಲ, ಮನೆಯ ಒಳಗೆ ಲೈಟ್ ಹಾಕಿಲ್ಲ, ಬಾಗಿಲು ಹಾಕಿದಂತಿದೆ. ನೀವೇನಾದರೂ ನಿಮ್ಮ ಮನೆಗೆ ಕರೆದುಕೊಂಡು ಹೋಗಿದ್ದೀರಾ ಅಥವಾ ಬೇರೆಯವರು ಕರೆದುಕೊಂಡು ಹೋಗಿದ್ದಾರಾ ಎಂದು ಕೇಳಿದ್ದಾರೆ.

ಸುದ್ದಿ ತಿಳಿದ ಕೂಡಲೇ ಲೋಕೇಶ್ ಮನೆಗೆ ಬಂದು ನೋಡಿದಾಗ ಡೋರ್ ಲಾಕ್ ಆಗಿತ್ತು.

ಒಳಗಡೆಯಿಂದ ಡೋರ್‌ಲಾಕ್ ಮಾಡಿಕೊಂಡು ಮಲಗಿರಬಹುದೆಂದು ಎಂಬ ಶಂಕೆಯಿಂದ ತಮ್ಮ ಬಳಿಯಿದ್ದ ಕೀಯಿಂದ ಬೀಗ ತೆಗೆದು ನೋಡಿದಾಗ ಕಮಲಮ್ಮ ಮಲಗಿದ ಭಂಗಿಯಲ್ಲೇ ಮೃತಪಟ್ಟಿದ್ದರು.

ನಂತರ ಗಮನಿಸಿದಾಗ ಕಿವಿ ಹಾಗು ಕುತ್ತಿಗೆ ಹತ್ತಿರ ರಕ್ತ ಕಾಣಿಸಿದ್ದು ಪರಿಶೀಲಿಸಿದಾಗ ಕಿವಿ, ಕುತ್ತಿಗೆ ಹಾಗು ಕೈಬೆರಳಿನಲ್ಲಿದ್ದ ಆಭರಣ ಇರಲಿಲ್ಲ. ದುಷ್ಕರ್ಮಿಗಳು ಚಿನ್ನಾಭರಣ ದೋಚುವ ಉದ್ದೇಶದಿಂದ ಉಸಿರುಗಟ್ಟಿಸಿ ಕಮಲಮ್ಮ ಅವರನ್ನು ಕೊಲೆ ಮಾಡಿ ಕಿವಿಯಲ್ಲಿದ್ದ 6 ಗ್ರಾಂ ತೂಕದ ಚಿನ್ನದ ಓಲೆ, ಕೈಬೆರಳಿನಲ್ಲಿದ್ದ 3 ಗ್ರಾಂ ತೂಕದ ಚಿನ್ನದ ಉಂಗುರ ಹಾಗೂ ಕುತ್ತಿಗೆಯಲ್ಲಿದ್ದ 38 ಗ್ರಾಂ.ತೂಕದ ಚಿನ್ನದ ಮಾಂಗಲ್ಯ ಸರ ಒಟ್ಟು 47 ಗ್ರಾಂ ತೂಕದ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ. ನಗರಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಜೂನ್-19

1975: ಎಮರ್ಜೆನ್ಸಿ ಘೋಷಣೆಗೂ ಮೊದಲ ದಿನ: ಇಂದಿರಾ ಗಾಂಧಿಯವರಿಗೆ ಅಲಾಹಾಬಾದ್ ಹೈಕೋರ್ಟ್ ತೀರ್ಪಿನಲ್ಲಿ ಚುನಾವಣೆಯಲ್ಲಿ ಅಕ್ರಮ ವಹಿವಾಟು ಮಾಡಿದ ಬಗ್ಗೆ ತೀರ್ಪು ಬಂದಿತ್ತು. ಇದರಿಂದಾಗಿ ತೀವ್ರ ರಾಜಕೀಯ ಕ್ರಾಂತಿ ಉಂಟಾಗಿ, ಮುಂದಿನ ದಿನವೇ ಎಮರ್ಜೆನ್ಸಿ ಘೋಷಿಸಲಾಯಿತು.

1981: ಭಾರತೀಯ ವಿಮಾನ ಪತನ: ಭೋಪಾಲ್‌ನಿಂದ ಹೊರಟ ಇಂಡಿಯನ್ ಏರ್‌ಲೈನ್ಸ್ ವಿಮಾನ ಒಂದು ಪಟಣಾದ ಬಳಿ ಪತನಗೊಂಡು 45 ಮಂದಿ ಮೃತರಾದರು.

2012: ಭಾರತದ ಮಾಜಿ ಕ್ರಿಕೆಟ್ ನಾಯಕ ಸೌರವ ಗಂಗೂಲಿಗೆ 40ನೇ ಜನ್ಮದಿನದ ಸಂದರ್ಭದಲ್ಲಿ ಃಅಅ ಅಭಿನಂದನೆ ಸಲ್ಲಿಸಿತು.

**ಜನನ**

1946: ಕಯ್ಯಾರ ಕಿಞಣ್ಣ ರೈ, ಕವಿ, ಸಾಹಿತಿ ಮತ್ತು ಪತ್ರಕರ್ತ

1970: ರಾಹುಲ್ ಗಾಂಧಿ, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಹಾಗೂ ಇಂದಿರಾ ಗಾಂಧಿಯ ಮೊಮ್ಮಗ

**ಮರಣ**

1996: ರಾಜೇಶ್ ಖನ್ನಾ, ಹಿಂದಿ ಚಿತ್ರರಂಗದ ಸೂಪರ್ ಸ್ಟಾರ್.

### ಕೊಂಚ ವಿರಮಿಸಿದ ವರುಣ : ಹೇಮೆ ಭರ್ತಿಗೆ 11 ಅಡಿ ಬಾಕಿ

ಹಾಸನ: ಕಳೆದ ನಾಲ್ಕೈದು ದಿನಗಳಿಂದ ಅಬ್ಬರಿಸಿದ ಮಳೆರಾಯ ಇಂದು ಕೆಲವೆಡೆ ಕೊಂಚ ಬಿಡುವು ನೀಡಿದ್ದಾನೆ. ಮಲೆನಾಡು ಭಾಗದಲ್ಲಿ ಮಳೆ ಮುಂದುವರಿದಿದ್ದರೆ, ನಗರ ಪ್ರದೇಶದಲ್ಲಿ ಬೆಳಗ್ಗೆಯಿಂದ ತುಸು ಬಿಡುವು ಸಿಕ್ಕಿದೆ. ಸಕಲೇಶಪುರ, ಚಿಕ್ಕಮಗಳೂರು ಭಾಗದಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಜೀವನದಿ ಹೇಮಾವತಿ ಜಲಾಶಯಕ್ಕೆ ಇಂದು ಒಳ ಹರಿವಿನ ಪ್ರಮಾಣ ಹೆಚ್ಚಾಗಿದೆ. ಒಟ್ಟಾರೆ ಹೇಮಾವತಿ ಜಲಾಶಯಕ್ಕೆ 19,546 ಕ್ಯೂಸೆಕ್ ನೀರು ಹರಿದು ಬರುತ್ತಿದೆ. 2922.00 ಅಡಿ ಗರಿಷ್ಠ ಮಟ್ಟದ ಜಲಾಶಯದಲ್ಲಿ ಇಂದು 2911.35 ಅಡಿ ನೀರಿದೆ. ಅಲ್ಲಿಗೆ ಜಲಾಶಯ ಭರ್ತಿಗೆ ಕೇವಲ 11 ಅಡಿ ಮಾತ್ರ ಬಾಕಿ ಇದೆ.

## ಆಲೂರು ತಾಲೂಕಿನ ಶಾಲೆಗಳಿಗೆ : ನೋಟ್‌ಬುಕ್-ಬ್ಯಾಗ್ ವಿತರಣೆ ನಾಳೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಆಲೂರು ತಾಲೂಕಿನ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ನೋಟ್ ಪುಸ್ತಕ ಹಾಗೂ ಬ್ಯಾಗ್ ವಿತರಣೆ ಕಾರ್ಯಕ್ರಮವನ್ನು ಗುರುವಾರ ಹಮ್ಮಿಕೊಳ್ಳಲಾಗಿದೆ ಎಂದು ಹಂಜಳಿಗೆ ಕಾಳಿಂಗಪ್ಪ ವೆಲ್ಫೇರ್ ಅಸೋಸಿಯೇಷನ್ ಸಂಸ್ಥಾಪಕ ಹಂಜಳಿಗೆ ಮಂಜುನಾಥ್ ಕಾಳಿಂಗಪ್ಪ ತಿಳಿಸಿದರು.

ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿ, ತಮ್ಮ ಸಂಸ್ಥೆಯಿಂದ 13ನೇ ವರ್ಷದ ಉಚಿತ ನೋಟ್ ಪುಸ್ತಕ ಹಾಗೂ ಬ್ಯಾಗ್ ವಿತರಣೆಯನ್ನು ಜೂ.19 ರಿಂದ ಆರಂಭಿಸಲಾಗಿದೆ.

ಈ ವರ್ಷವೂ ಕೂಡ ಆಲೂರು ತಾಲೂಕಿನ ಎಲ್ಲಾ ಪ್ರಾಥಮಿಕ ಶಾಲೆಗಳಿಗೂ ಸುಮಾರು 30 ಸಾವಿರ ನೋಟ್ ಪುಸ್ತಕ ಹಾಗೂ ಆಯ್ದ ಶಾಲೆಗಳಿಗೆ 1000 ಸ್ಕೂಲ್ ಬ್ಯಾಗ್ ವಿತರಣೆ ಮಾಡಲಾಗುತ್ತಿದೆ.



ಜೊತೆಗೆ ಪ್ರತಿ ವರ್ಷದಂತೆ ಈ ವರ್ಷವೂ ಡಿಜಿಟಲ್ ಎಜುಕೇಷನ್‌ಗೆ ಒತ್ತುಕೊಡುವ ಉದ್ದೇಶದಿಂದ ಗ್ರಾಮೀಣ ಭಾಗದ ಮಕ್ಕಳು ಆರಂಭದಿಂದಲೇ ಬೇಸಿಕ್ ಕಂಪ್ಯೂಟರ್ ಕಲಿಯಲು 5 ಸ್ಮಾರ್ಟ್ ಕ್ಲಾಸ್ ಪ್ರಾರಂಭಿಸುವ ಗುರಿ ಇಟ್ಟುಕೊಂಡು ಈಗಾಗಲೇ ಹಿರಿಯ ಪ್ರಾಥಮಿಕ ಶಾಲೆ ಕಣತೂರು, ಬೈರಪುರ ಹಾಗೂ ಹೋತನಹಳ್ಳಿಪುರ ಶಾಲೆಗಳಿಗೆ ಸ್ಮಾರ್ಟ್ ಕ್ಲಾಸ್ ಪ್ರಾರಂಭಿಸುವ ಯೋಜನೆ ಇಟ್ಟುಕೊಳ್ಳಲಾಗಿದೆ ಎಂದರು.

ಇವರು ಸರ್ಕಾರಿ ಶಾಲೆ ಉಳಿಸುವ ಮತ್ತು ಬೆಳೆಸುವ ಉದ್ದೇಶದಿಂದ ಆರಂಭವಾದ ನಮ್ಮ ನಡಿಗೆ ಸರ್ಕಾರಿ ಶಾಲೆಯ ಕಡೆಗೆ ಅಭಿಯಾನದಲ್ಲಿ ಸರ್ಕಾರಿ ಶಾಲೆ ಉಳಿಸಲು ಹಣ ತೊಟ್ಟು ಈಗಾಗಲೇ ಆಲೂರು ತಾಲೂಕಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಇದುವರೆಗೂ ಸುಮಾರು 1 ಲಕ್ಷಕ್ಕಿಂತ ಹೆಚ್ಚು ನೋಟ್ ಪುಸ್ತಕ, 5,000 ಬ್ಯಾಗ್, 5 ಲಕ್ಷಕ್ಕಿಂತ ಹೆಚ್ಚು ಲೇಖನ ಸಾಮಗ್ರಿ, ಸುಮಾರು 30 ಲಕ್ಷದಲ್ಲಿ 16 ಸ್ಮಾರ್ಟ್ ಕ್ಲಾಸ್, 7.5 ಲಕ್ಷ ವೆಚ್ಚದಲ್ಲಿ ಆಲೂರು ತಾಲೂಕಿನ ಎಲ್ಲಾ, ಪ್ರಾಥಮಿಕ ಶಾಲೆಗಳ ಕೊಠಡಿಗಳಿಗೆ 6 4 ಅಳತೆ ಗ್ರೀನ್ ಬೋರ್ಡ್ ಹಾಕಿಸಿ ಕೊಡಲಾಗಿದೆ. ಇದುವರೆಗೂ ಸರ್ಕಾರಿ ಶಾಲೆ ಉಳಿಸಬೇಕು ಮತ್ತು ಬೆಳೆಸಲು ಕಳೆದ 12 ವರ್ಷಗಳಲ್ಲಿ 1 ಕೋಟಿ 30 ಲಕ್ಷಕ್ಕಿಂತ ಹೆಚ್ಚು ವೆಚ್ಚ ಮಾಡಿದ್ದಾರೆ.

ಏಪ್ರಿಲ್ 11 ರಂದು ಸರ್ಕಾರಿ ಹಿರಿಯ ತರಬೇತಿ ಕೇಂದ್ರ (ಐಟಿಐ) ಕಾಲೇಜಿಗೆ ಅತ್ಯಾಧುನಿಕ ತಂತ್ರಜ್ಞಾನದ ಸಿ.ಎನ್.ಸಿ. ಲ್ಯಾಬ್ ಹಾಗೂ ಸಿಮ್ಯುಲೇಶನ್ ಲ್ಯಾಬ್‌ಗಳನ್ನ 46 ಲಕ್ಷಗಳ ವೆಚ್ಚದಲ್ಲಿ ಮಾಡಿಕೊಡಲಾಗಿದೆ.

ಪದ್ಮಶ್ರೀ ವಿಜೇತ ಹರೆಕಳ ಹಾಜಬ್ಬ ಅವರ ವಿನಂತಿಯ ಮೇರೆಗೆ ಅವರು ನಡೆಸುತ್ತಿರುವ ಸರ್ಕಾರಿ ಶಾಲೆಗೆ ಉಚಿತವಾಗಿ ಒಂದು ಪ್ರಿಂಟರ್ ಕೂಡ ನೀಡಲಾಗಿದೆ ಎಂದರು.

ಗ್ರಾಮೀಣ ಭಾಗದ ಪ್ರೌಢಶಾಲೆಯಲ್ಲಿ ಓದುತ್ತಿರುವ 10 ವಿದ್ಯಾರ್ಥಿನಿಯರನ್ನು ಗುರುತಿಸಿ ಮುಂದಿನವಾರ

ಸೈಕಲ್ ವಿತರಣೆ ಮಾಡುವ ಉದ್ದೇಶ ಹೊಂದಲಾಗಿದೆ. ಮುಂದಿನವಾರ ಅಷ್ಟೂ ಸೈಕಲ್ ವಿತರಣೆ ಮಾಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆ ನಿರ್ದೇಶಕ ಹಲಸೂರು ಕಾಂತರಾಜು, ದಾಸೇಗೌಡ, ಸತೀಶ್ ಇದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248